# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

GROWTH DRIVEN BY PERFORMANCE

Website : www.ramakrishnacredit.com Email : ho@ramakrishnacredit.com

ಸಂಪುಟ : III ಸಂಚಿಕೆ : 1 ಒಬ್ಬನು ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ ಎಪ್ರಿಲ್ – ಜೂನ್ 2017


## ಅಧ್ಯಕ್ಷರ ಮಾತು



ಶ್ರೀ ಕೆ.ಜೈರಾಜ್ ಬಿ. ರೈ, ಅಧ್ಯಕ್ಷರು

### ಸಂಸ್ಥಾಪನಾ ದಿನಾಚರಣೆ

### 2017–18ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿಯಲ್ಲಿ ಉತ್ತಮ ವ್ಯವಹಾರಾಭಿವೃದ್ಧಿ

1994ರಲ್ಲಿ ಸ್ಥಾಪನೆಯಾದ ಸಂಘವು ಮೇ 7, 2017ಕ್ಕೆ 23ನೇ ಸಾಲಿಗೆ ಕಾಲಿರಿಸಿತು. ಸಂಘದ ಸ್ಥಾಪನಾ ದಿವಸವನ್ನು ಕೊಂಡಾಡಲು, ದಿನಾಂಕ 16.05.2017 ರಂದು ಮಂಗಳೂರಿನ ಬಂಟ್ಸ್ ಹಾಸ್ಟೆಲ್‌ನ ಅಮೃತೋತ್ಸವ ಕಟ್ಟಡದ ಹಾಲ್‌ನಲ್ಲಿ ಸಂಸ್ಥಾಪನಾ ದಿನಾಚರಣೆಯನ್ನು ಮೊದಲ ಬಾರಿಗೆ ಆಚರಿಸಲಾಯಿತು ಎಂದು ತಿಳಿಸಲು ಬಹಳ ಸಂತೋಷಪಡುತ್ತೇವೆ. ಇನ್ನು ಮುಂದೆ ಪ್ರತಿ ವರ್ಷವೂ ಸಂಸ್ಥಾಪನಾ ದಿನವನ್ನು ಆಚರಿಸಲಾಗುವುದು.

2017–18ನೇ ಸಾಲಿನ ಮೊದಲ ತ್ರೈಮಾಸಿಕ ಅವಧಿ ಅಂತ್ಯ ದಿನಾಂಕ 30.06.2017ಕ್ಕೆ ಇದ್ದಂತೆ ಸಂಘದ ಪ್ರಗತಿ ವಿವರವನ್ನು ಪರಿಶೀಲಿಸಿದಾಗ, ಮಾರ್ಚ್ 2017ಕ್ಕೆ ರೂ.242 ಕೋಟಿಯಿದ್ದ ಒಟ್ಟು ವ್ಯವಹಾರವು ರೂ.6 ಕೋಟಿಯಷ್ಟು ವೃದ್ಧಿಗೊಂಡು 30.06.2017ಕ್ಕೆ ರೂ.248 ಕೋಟಿ ಮೀರಿರುವುದು ಹರ್ಷದಾಯಕ. ದಿನಾಂಕ 30.06.2017ಕ್ಕೆ ಠೇವಣಿ ರೂ.136 ಕೋಟಿ, ಸಾಲ ಮತ್ತು ಮುಂಗಡವು ರೂ.112 ಕೋಟಿಯಾಗಿ ಉತ್ತಮ ಪ್ರಗತಿಯನ್ನು ಸಾಧಿಸಿರುವುದು.

ನಿಗದಿತ ಗುರಿಗಳಲ್ಲಿ ಅತೀ ಹೆಚ್ಚಿನ ಗುರಿ ಸಾಧಿಸಿದ ಮುಲ್ಕಿ, ವೆಲೆನ್ಸಿಯಾ, ಉಪ್ಪಿನಂಗಡಿ, ಸುಳ್ಯ, ಬಿ.ಸಿ.ರೋಡ್, ಕಾರ್ಕಳ ಮತ್ತು ಸುರತ್ಕಲ್ ಶಾಖೆಗಳಿಗೆ ನಮ್ಮ ಅಭಿನಂದನೆಗಳು.

ಸ0ಘವು 2017–18ನೇ ಸಾಲಿಗೆ ನಿಗದಿಯಾಗುವ ಎಲ್ಲಾ ಗುರಿಗಳನ್ನು ತಪ್ಪದೇ ಸಾಧಿಸಿ, ಉತ್ತಮ ವ್ಯವಹಾರಾಭಿವೃದ್ಧಿ ಹೊಂದುವರೇ ಈಗಿನಿಂದಲೇ ಅತ್ಯಂತ ಮುತುವರ್ಜಿಯಿಂದ ಕಾರ್ಯ ನಿರ್ವಹಿಸಲು ಎಲ್ಲಾ ಶಾಖಾಧಿಕಾರಿಗಳಿಗೆ ಮತ್ತು ಎಲ್ಲಾ ಸಿಬ್ಬಂದಿಗಳಿಗೆ ಈ ಮೂಲಕ ಕರೆ ನೀಡುತ್ತಿದ್ದೇನೆ.

ಸಂಘದ ಆಡಳಿತ ಮಂಡಳಿ ನಿರ್ದೇಶಕರು, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು, ಎಲ್ಲಾ ಸದಸ್ಯ ಬಾಂಧವರಿಗೆ ಹಾಗೂ ಸಿಬ್ಬಂದಿ ವರ್ಗ ಮತ್ತು ಎಲ್ಲಾ ಹಿತೈಷಿಗಳಿಗೆ ಸಂಘದ ಸಂಸ್ಥಾಪನಾ ದಿನಾಚರಣೆ ಸಂಭ್ರಮದ ಅಭಿನಂದನೆಗಳು.

## ಸಂಘದ ಸಂಸ್ಥಾಪನಾ ದಿನಾಚರಣೆ



ಸಂಘದ ಸಂಸ್ಥಾಪನಾ ದಿನಾಚರಣೆಯು ಮಂಗಳೂರಿನ ಬಂಟ್ಸ್ ಹಾಸ್ಟೆಲ್‌ನ ಅಮೃತೋತ್ಸವ ಕಟ್ಟಡದ ಹಾಲ್‌ನಲ್ಲಿ ದಿನಾಂಕ 16.05.2017ರಂದು ಜರಗಿತು.

ಸಮಾರಂಭವನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಸಂಘವು 07.05.1994ರಂದು ಆರಂಭವಾಗಿ, ಇದೀಗ 23ನೇ ವರ್ಷ ಪೂರೈಸಿದ್ದು, ಈ ಸಂದರ್ಭದಲ್ಲಿ ಸಂಘದ ಸ್ಥಾಪನೆಗೆ ಕಾರಣ ಕರ್ತರಾದ ಸ್ಥಾಪಕಾಧ್ಯಕ್ಷರಾದ ದಿ। ಕೆ.ಬಿ. ಜಯಪಾಲ ಶೆಟ್ಟಿ ಹಾಗೂ ಅವರೊಂದಿಗೆ ಸಹಕರಿಸಿದ ಪ್ರವರ್ತಕರನ್ನು ಸ್ಮರಿಸಿಕೊಂಡು ಅವರನ್ನು ಮುಂದಿನ ಪೀಳಿಗೆಗೆ ಪರಿಚಯ ಮಾಡಿಕೊಡಲು ಇಂತಹ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಹಾಗೂ ಇನ್ನು ಮುಂದೆ ಪ್ರತಿ ವರ್ಷವು ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಗುವುದು ಎಂದು ತಿಳಿಸಿದರು. ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿದ್ದು, ಸಂಘವು ಸ್ಥಾಪನೆಯ ಈ 23 ವರ್ಷಗಳಲ್ಲಿ ಸಾಧಿಸಿದ ಅಮೂಲಾಗ್ರ ಪ್ರಗತಿಗೆ ಸಹಕರಿಸಿದ ಎಲ್ಲಾ ಸದಸ್ಯಗ್ರಾಹಕ ಬಂಧುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಸ್ಥಾಪಕಾಧ್ಯಕ್ಷ ದಿ। ಕೆ.ಬಿ. ಜಯಪಾಲ ಶೆಟ್ಟಿಯವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಯನ್ನು ಅರ್ಪಿಸಲಾಯಿತು.

ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರುರವರು ಸ್ವಾಗತಿಸಿದರು. ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ.ಯವರು ಸಂಘವು ನಡೆದು ಬಂದ ದಾರಿಯ ಬಗ್ಗೆ ಪ್ರಸ್ತಾವಿಕ ಭಾಷಣ ಮಾಡಿದರು. ಈ ಸಂದರ್ಭದಲ್ಲಿ ನಡೆದ ಮಂಗಳೂರು ಶಾಖಾ ಗ್ರಾಹಕ ಸಂಪರ್ಕ ಸಭೆಯಲ್ಲಿ ಶಾಖೆಯ ಉತ್ತಮ ಗ್ರಾಹಕರುಗಳಾದ ಬಂಟರ ಯಾನೆ ನಾಡವರ ಮಾತೃ ಸಂಘ ದ.ಕ. ಮಂಗಳೂರು, ಜಾಗತಿಕ ಬಂಟ ಪ್ರತಿಷ್ಠಾನ, ಶ್ರೀ ಕೃಷ್ಣ ಮಾರ್ಲ, ಶ್ರೀ ಕೃಷ್ಣ ಮೂರ್ತಿ, ಶ್ರೀ ಉಮೇಶ್ ಶೆಟ್ಟಿ, ಶ್ರೀ ಕಿಶೋರ್ ಭಂಡಾರಿ ಬೆಳ್ಳಿಪಾಡಿ, ಶ್ರೀ ಪ್ರದೀಪ್ ಕುಮಾರ್ ಶೆಟ್ಟಿ, ಶ್ರೀಮತಿ ಪಿಲೋಮಿನಾ ಡಿಸೋಜ, ಶ್ರೀ ಅಬ್ದುಲ್ ಮುನೀರ್, ಶ್ರೀ ಬಿ.ಎನ್. ರಾವ್‌ರವರನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷೆ ಶ್ರೀಮತಿ ಲಕ್ಷ್ಮಿ ಜೆ. ಶೆಟ್ಟಿ, ನಿರ್ದೇಶಕ ರಾದ ಶ್ರೀಮತಿ ರತ್ನಕಾಂತಿ ಶೆಟ್ಟಿ, ಡಾ। ಸುಭಾಶ್ಚಂದ್ರ ಶೆಟ್ಟಿ, ಶ್ರೀ ಪಿ.ಎಸ್. ಅಡ್ಯಂತಾಯ, ಸಿಎ ಎಚ್.ಆರ್. ಶೆಟ್ಟಿ, ಶ್ರೀ ವಿಠಲ ಪಿ. ಶೆಟ್ಟಿ, ಶ್ರೀ ಎಂ. ರಾಮಯ ಶೆಟ್ಟಿ, ಶ್ರೀ ಎಂ. ಸೀತಾರಾಮ ಶೆಟ್ಟಿ, ಶ್ರೀ ಅರುಣ್ ಕುಮಾರ್ ಶೆಟ್ಟಿ, ಶ್ರೀ ರವೀಂದ್ರನಾಥ ಜಿ. ಹೆಗ್ಡೆ, ಶ್ರೀ ಬಿ. ದಯಾಕರ್ ಆಳ್ವ, ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ, ಡಾ। ಎಂ. ಸುಧಾಕರ ಶೆಟ್ಟಿ ಹಾಗೂ ಮಂಗಳೂರು ಶಾಖಾಧಿಕಾರಿ ಶ್ರೀ ಮೋಹನ್‌ದಾಸ್ ಶೆಟ್ಟಿಯವರು ಉಪಸ್ಥಿತರಿದ್ದರು. ನಿರ್ದೇಶಕರಾದ ಶ್ರೀ ಎಂ. ರಾಮಯ ಶೆಟ್ಟಿ ವಂದಿಸಿದರು. ಲೇಖಕಿ ಶ್ರೀಮತಿ ರೂಪಕಲಾ ಆಳ್ವರವರು ಕಾರ್ಯಕ್ರಮ ನಿರೂಪಿಸಿದರು.

# ಗುಜರಾತ್‌ನ ದಿ. ವಿಜಯ ಕ್ರೆಡಿಟ್ ಮತ್ತು ಸಪ್ಲೈ ಕೋ–ಓಪರೇಟಿವ್ ಸೊಸೈಟಿ ಲಿ.ನ ಪದಾಧಿಕಾರಿಗಳು ಸಂಘಕ್ಕೆ ಸೌಹಾರ್ದ ಭೇಟಿ



ಗುಜರಾತ್ ರಾಜ್ಯದ ಅಹಮ್ಮದಾಬಾದ್‌ನ ಧೋಲಾರ್‌ನಲ್ಲಿರುವ ದಿ. ವಿಜಯ ಕ್ರೆಡಿಟ್ ಮತ್ತು ಸಪ್ಲೈ ಕೋ–ಓಪರೇಟಿವ್ ಸೊಸೈಟಿ ಲಿ. ನ ಅಧ್ಯಕ್ಷ ಶ್ರೀ ಯು.ಜಿ.ಶೇಖ್ ಮತ್ತು ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸಂಘದ ಕೇಂದ್ರ ಕಛೇರಿಗೆ ಇತ್ತೀಚೆಗೆ ಸೌಹಾರ್ದ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಉಭಯ ಸಂಘಗಳ ವ್ಯವಹಾರಗಳ ಬಗ್ಗೆ ವಿಚಾರ ವಿನಿಮಯವನ್ನು ಮಾಡಿಕೊಳ್ಳಲಾಯಿತು.

# ಸುರತ್ಕಲ್ ಶಾಖಾ ಗ್ರಾಹಕ ಸಂಪರ್ಕ ಸಭೆ



ಸಂಘದ ಸುರತ್ಕಲ್ ಶಾಖೆಯ ಸ್ಥಾಪನಾ ದಿನದಂಗವಾಗಿ ಜುಲೈ ತಿಂಗಳ 7ನೇ ತಾರೀಕು ಶುಕ್ರವಾರದಂದು ಗ್ರಾಹಕ ಸಂಪರ್ಕ ಸಭೆಯು ಶಾಖಾ ಕಛೇರಿಯಲ್ಲಿ ಜರಗಿತು.

ಸಮಾರಂಭವನ್ನು ಸಂಘದ ಅಧ್ಯಕ್ಷ ಶ್ರೀ ಕೆ. ಜೈರಾಜ್ ಬಿ. ರೈಯವರು ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ಈ ಕಾರ್ಯಕ್ರಮಕ್ಕೆ ಸಂಘದ ಮೇಲೆ ಅಭಿಮಾನವಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಸದಸ್ಯ ಗ್ರಾಹಕ ಬಂಧುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ನಮ್ಮ ಸಂಸ್ಥೆಯ ಮತ್ತು ಸುರತ್ಕಲ್ ಶಾಖೆಯ ಯಶಸ್ವಿಗೆ ಸದಸ್ಯ ಗ್ರಾಹಕರು ನಮ್ಮ ಮೇಲಿಟ್ಟಿರುವ ವಿಶ್ವಾಸ. ಆ ವಿಶ್ವಾಸಕ್ಕೆ ಭಂಗ ಬರದ ರೀತಿಯಲ್ಲಿ ಸೇವೆಯನ್ನು ನೀಡಲು ಪ್ರಯತ್ನಿಸುತ್ತೇವೆ, ಗ್ರಾಹಕರೇ ಸಂಸ್ಥೆಯ ಬೆನ್ನೆಲುಬು ಎಂದು ತಿಳಿಸಿ, ಇನ್ನಷ್ಟು ಹೆಚ್ಚಿನ ತಂತ್ರಜ್ಞಾನ ಅಳವಡಿಕೆಯನ್ನು ಮಾಡಿಕೊಂಡು ಇನ್ನೂ ಉತ್ತಮ ಸೇವೆಯನ್ನು ಗ್ರಾಹಕರಿಗೆ ನೀಡಲು ಕ್ರಮವಿಡಲಾಗುವುದು ಎಂದು ಹೇಳಿದರು.

ಶಾಖೆಯ ಉಸ್ತುವಾರಿ ನಿರ್ದೇಶಕರಾದ ಶ್ರೀ ಪಿ.ಎಸ್. ಅಡ್ಯಂತಾಯರವರು ಶಾಖೆಯ ಹುಟ್ಟು ಬೆಳವಣಿಗೆಯ ಬಗ್ಗೆ ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಸಭೆಗೆ ತಿಳಿಸಿ, ಸಂಸ್ಥೆಯು ಹೊಂದಿದ 18 ಶಾಖೆಗಳಲ್ಲಿ ಸಂಘದ ಪ್ರಮುಖ ಶಾಖೆಯಾದ ಮಂಗಳೂರು ಶಾಖೆಯನ್ನು ಹೊರತುಪಡಿಸಿ, ಮೊದಲನೇ ಸ್ಥಾನದಲ್ಲಿರುವುದು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾದ ಡಾ। ಟಿ.ಆರ್. ಶೆಟ್ಟಿಯವರು, ಶಾಖೆಯು ಸಂಘದ ದೊಡ್ಡ ಶಾಖೆಗಳಲ್ಲೊಂದಾಗಿ ಮೂಡಿಬಂದು, ಶಾಖೆ ಆರಂಭವಾಗಿ ಈ 20 ವರ್ಷಗಳಲ್ಲಿ 6 ಬಾರಿ ಉತ್ತಮ ಶಾಖಾ ಪ್ರಶಸ್ತಿಯನ್ನು ಗಳಿಸಿದೆ. ಇದಕ್ಕೆ ಕಾರಣಕರ್ತರಾದ ಸುರತ್ಕಲ್ ಶಾಖೆಯ ಗ್ರಾಹಕರು ಮತ್ತು ಶಾಖೆಯಲ್ಲಿ ಸೇವೆ ಸಲ್ಲಿಸಿದ ಎಲ್ಲಾ ಸಿಬ್ಬಂದಿಗಳನ್ನು ಅಭಿನಂದಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಸುರತ್ಕಲ್ ಶಾಖೆಯನ್ನು ಹವಾನಿಯಂತ್ರಣ ವ್ಯವಸ್ಥೆಯೊಂದಿಗೆ ಆಧುನಿಕವಾಗಿ ನವೀಕರಿಸ ಲಾಗುವುದೆಂದು ತಿಳಿಸಿರುವುದಕ್ಕೆ ಶಾಖೆಯ ಪರವಾಗಿ ಕೃತಜ್ಞತೆಯನ್ನು ಸಲ್ಲಿಸಿದರು.

ಸಭೆಯಲ್ಲಿ ಶಾಖೆಯ ಉತ್ತಮ ಗ್ರಾಹಕರುಗಳಾದ ಸುರತ್ಕಲ್ ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್, ಎನ್.ಐ.ಟಿ.ಕೆ ನೌಕರರ ಸಹಕಾರ ಸಂಘ, ದಾವೂದ್, ಸುರೇಶ್, ಬಾಲಕೃಷ್ಣ ಶೆಟ್ಟಿ, ಸೀತಾರಾಮ, ರಮ್ಲತ್, ಅನ್ವರ್ ಹುಸೈನ್, ಸುರತ್ಕಲ್ ಮಹಿಳಾ ಬಂಟರ ವೇದಿಕೆ, ಕಟ್ಟಡ ಮಾಲಕರಾದ ಬಾಲಕೃಷ್ಣ ಶೆಟ್ಟಿಯವರಿಗೆ ಈ ಸಂದರ್ಭದಲ್ಲಿ ಕಿರುಕಾಣಿಕೆ ನೀಡಿ ಗೌರವಿಸಲಾಯಿತು.

ಶಾಖಾ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಭೋಜ ಶೆಟ್ಟಿ, ಡಾ। ಕೆ.ಪಿ.ಕೆ. ಹೆಗ್ಡೆ, ಶ್ರೀ ರಮಾನಂದ ರಾವ್, ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್ ಜಿ.ಕೆ. ಸಭೆಯಲ್ಲಿ ಉಪಸ್ಥಿತರಿದ್ದರು.

ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಎಂ.ಜೆ. ಶೆಟ್ಟಿಯವರು ಸ್ವಾಗತಿಸಿದರು. ಕು. ಪೂಜಾರಾವ್‌ರವರು ಕಾರ್ಯಕ್ರಮ ನಿರೂಪಿಸಿದರು. ಕಾನ್ಫಿಡೆನ್ಷಿಯಲ್ ಟುಟೋರಿ ಯಲ್ಸ್‌ನ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಶಾಖಾಧಿಕಾರಿ ಶ್ರೀ ವಿನಯಕುಮಾರ್ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು.

ಪ್ರಗತಿಯ ಪಕ್ಷಿನೋಟ

## ಸಂಘದ ಜೂನ್ 2017ರ ಪ್ರಗತಿ ವಿವರ

| ಕ್ರ.ಸಂ. | ಕಾರ್ಯ ವಿಭಾಗ | ಜೂನ್ 2016ಕ್ಕೆ ಇದ್ದಂತೆ | ಜೂನ್ 2017ಕ್ಕೆ ಇದ್ದಂತೆ | ಹೆಚ್ಚಳ (ರೂ) |
|---|---|---|---|---|
| 1 | ಠೇವಣಾತಿಗಳು | ₹ 128.45 Cr. | ₹ 136.01 Cr. | ₹ 7.56 ಕೋಟಿ |
| 2 | ಸಾಲ ಮತ್ತು ಮುಂಗಡ | ₹ 101.62 Cr. | ₹ 112.25 Cr. | ₹ 10.63 ಕೋಟಿ |
| 3 | ನಿವ್ವಳ ಅನುತ್ಪಾದಕ ಆಸ್ತಿ | Nil | Nil | |
| 4 | ನಿವ್ವಳ ಲಾಭ | ₹ 56 lakhs | ₹ 57.96 lakhs | ₹ 1.96 ಲಕ್ಷ |
| **5** | **ಒಟ್ಟು ವ್ಯವಹಾರ** | **₹ 230.07 ಅಡಿ.** | **₹ 248.26 ಅಡಿ.** | **₹ 18.19ಕೋಟಿ** |

## ಪ್ರಗತಿಯಲ್ಲಿರುವ ಕಾರ್ಯಯೋಜನೆಗಳು

1) ಬಿ.ಸಿ.ರೋಡ್ ಶಾಖೆಯನ್ನು ಹೆಚ್ಚುವರಿ ಸ್ಥಳಾವಕಾಶಕ್ಕೆ ವಿಸ್ತರಿಸಲು ಹವಾನಿಯಂತ್ರಿತ ವ್ಯವಸ್ಥೆಯೊದಿಗೆ ನವೀಕರಣ ಕಾರ್ಯ ಪ್ರಗತಿಯಲ್ಲಿದೆ.
2) ವಿಟ್ಲ ಶಾಖೆಯನ್ನು ಹೆಚ್ಚುವರಿ ಸ್ಥಳಾವಕಾಶಕ್ಕೆ ವಿಸ್ತರಿಸಲು ಹವಾನಿಯಂತ್ರಿತ ವ್ಯವಸ್ಥೆಯೊದಿಗೆ ನವೀಕರಣ ಕಾರ್ಯ ಪ್ರಗತಿಯಲ್ಲಿದೆ.
3) ಸಂಘದ ಕೇಂದ್ರ ಕಛೇರಿಯ ಬೋರ್ಡ್ ರೂಂನ ವಿಸ್ತರಣೆ ಮತ್ತು ನವೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

## ಶ್ರದ್ಧಾಂಜಲಿ

ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರ ಅತ್ತೆಯವರಾದ ಪಾವೂರುಗುತ್ತು ಶ್ರೀಮತಿ ಸುನಂದ ಜೆ. ಶೆಟ್ಟಿ (ಪುತ್ತಿಗೆಗುತ್ತು ಬರಕಲ ದಿ| ಜಯರಾಮ ಶೆಟ್ಟಿಯವರ ಧರ್ಮಪತ್ನಿ) ಇವರು ದಿನಾಂಕ 10.06.2017 ರಂದು ದೈವಾಧೀನರಾಗಿರುವರು. ಇವರ ನಿಧನಕ್ಕೆ ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅಗಲಿದ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಿದ್ದೇವೆ.

## ಎರಡು ಹೊಸ ಶಾಖೆಗಳನ್ನು ತೆರೆಯಲು ಇಲಾಖಾನುಮತಿ

ಮಂಗಳೂರು ನಗರದ ಬಂದರ್/ ಹಂಪನಕಟ್ಟೆಯಲ್ಲಿ ಮತ್ತು ಪುತ್ತೂರು ತಾಲೂಕಿನ ಕಡಬದಲ್ಲಿ ಎರಡು ಹೊಸ ಶಾಖೆಯನ್ನು ತೆರೆಯಲು ಇಲಾಖಾನುಮತಿಯು ಬಂದಿರುತ್ತದೆ. ಶೀಘ್ರದಲ್ಲಿ ಈ ಎರಡು ಹೊಸ ಶಾಖೆಗಳನ್ನು ತೆರೆಯಲಾಗುವುದು.

## ಸಂಘದ ವಾರ್ಷಿಕ ಮಹಾಸಭೆ

ನಮ್ಮ ಸಂಘದ 2016–17ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು 17.09.2017ನೇ ಆದಿತ್ಯವಾರ "ಮಂಗಳೂರಿನ ಲೇಡಿಹಿಲ್‌ನಲ್ಲಿರುವ ಉರ್ವ ಚರ್ಚ್ ಸೆಂಟನರಿ ಹಾಲ್"ನಲ್ಲಿ ಜರಗಿಸಲು ತೀರ್ಮಾನಿಸಲಾಗಿದೆ. ಸಭೆಯ ನೋಟೀಸನ್ನು ಕಳುಹಿಸಲಾಗುವುದು.

## ಹುಟ್ಟು ಹಬ್ಬದ ಶುಭಾಶಯಗಳು

ಶ್ರೀಮತಿ ಲಕ್ಷ್ಮೀಜೆ. ಶೆಟ್ಟಿ – ಉಪಾಧ್ಯಕ್ಷರು
ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ – ನಿರ್ದೇಶಕರು
ಸವಣೂರು ಶ್ರೀ ಸೀತಾರಾಮ ರೈ – ನಿರ್ದೇಶಕರು

| ಸಿಬ್ಬಂದಿ ಹೆಸರು | ಶಾಖೆ | ಸಿಬ್ಬಂದಿ ಹೆಸರು | ಶಾಖೆ |
|---|---|---|---|
| ಶ್ರೀ ಮಿಥುನ್‌ಚಂದ್ರ | ಉಡುಪಿ | ಶ್ರೀ ವಿರಾಜ್ ಜೆ. ಶೆಟ್ಟಿ | ಕಾರ್ಕಳ |
| ಶ್ರೀ ತಿಮ್ಮಯ್ಯ ಶೆಟ್ಟಿ | ಚಿಲಿಂಬಿ | ಶ್ರೀಮತಿ ಮಮತಾ ಎಚ್. | ಉಪ್ಪಿನಂಗಡಿ |
| ಶ್ರೀ ಚಂದ್ರಹಾಸ್ ಶೆಟ್ಟಿ | ವೆಲೆನ್ಸೀಯಾ | ಶ್ರೀ ಅಶೋಕ್ ಎಂ. | ಕಾರ್ಕಳ |
| ಶ್ರೀ ದಿನೇಶ್ ಶೆಟ್ಟಿ | ವಿಟ್ಲ | ಶ್ರೀ ಸುರೇಶ್ ನ್ಯಾಕ್ | ಮೂಡಬಿದ್ರಿ |
| ಕು. ಜಯಲಕ್ಷ್ಮಿ | ಹೆಬ್ರಿ | ಶ್ರೀಮತಿ ರೇಖಾ ಎನ್. ಶೆಟ್ಟಿ | ಸುರತ್ಕಲ್ |
| ಶ್ರೀಮತಿ ವೈಶಾಲಿ | ಬಿ.ಸಿ.ರೋಡ್ | ಶ್ರೀಮತಿ ಮಮತಾ ಎಂ. | ಮಂಗಳೂರು |
| ಶ್ರೀ ದಿನೇಶ್ ರೈ | ಸುಳ್ಯ | ಶ್ರೀಮತಿ ಶ್ವೇತಾ | ಕೇಂದ್ರ ಕಛೇರಿ |
| ಶ್ರೀ ಸುಧೀರ್‌ಕುಮಾರ್ ಡಿ. | ಸುರತ್ಕಲ್ | ಶ್ರೀ ಮೋಹನ್ ಶೆಟ್ಟಿ | ಉಡುಪಿ |
| ಶ್ರೀ ದಿತೇಶ್ | ಮುಲ್ಕಿ | ಶ್ರೀ ನವೀನ್ ಶೆಟ್ಟಿ | ಕೇಂದ್ರ ಕಛೇರಿ |
| ಶ್ರೀ ಸುಭ್ರತ್ | ಕಾರ್ಕಳ | ಶ್ರೀ ಅಮಿತ್ ಕುಮಾರ್ | ವೆಲೆನ್ಸೀಯಾ |
| ಶ್ರೀ ಜಯರಾಮ್ | ಕುಂದಾಪುರ | ಶ್ರೀಮತಿ ಅರುಣ ರೈ | ವೆಲೆನ್ಸೀಯಾ |
| ಶ್ರೀ ಪ್ರವೀಣ್ ರೈ | ಉಪ್ಪಿನಂಗಡಿ | | |

ಈ ತ್ರೈಮಾಸಿಕ ಅವಧಿಯಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭವನ್ನು ಕೋರುತ್ತೇವೆ.

## ಗೃಹಪ್ರವೇಶ

ಸಂಘದ ಚಿಲಿಂಬಿ ಶಾಖೆಯ ಶ್ರೀ ರಾಮಕೃಷ್ಣ ನಿತ್ಯ ನಿಧಿ ಠೇವಣಿ ಸಂಗ್ರಾಹಕರಾದ ಶ್ರೀ ಉಮಾನಾಥ ಎಂ.ಎಸ್. ರವರ ಹೊಸ ಮನೆ "ಶ್ರೀ ಗಣೇಶ್" ಇದರ ಗೃಹಪ್ರವೇಶ ಕಾರ್ಯಕ್ರಮ ದಿನಾಂಕ 26.06.2017 ರಂದು ಜರಗಿತು. ಶ್ರೀಯುತರಿಗೆ ಅಭಿನಂದನೆಗಳು.

## ರೂ. 21,000/– ಸಂಬಳ ಮಿತಿಯೊಳಗಿರುವ ಸಂಘದ ಸಿಬ್ಬಂದಿಗಳಿಗೆ ಇ.ಎಸ್.ಐ. ವಿಮಾ ಸೌಲಭ್ಯ

ದಿನಾಂಕ 01.03.2017ರಿಂದ ಅನ್ವಯಿಸುವಂತೆ ರೂ. 21,000/– ಸಂಬಳ ಮಿತಿಯೊಳಗಿರುವ ಸಂಘದ ಸಿಬ್ಬಂದಿಗೆ ಇ.ಎಸ್.ಐ ವಿಮಾ ಸೌಲಭ್ಯವನ್ನು ಅನ್ವಯಿಸಿಕೊಳ್ಳಲಾಗಿದೆ.

## ಸಿಬ್ಬಂದಿ ಪದೋನ್ನತಿ

| ಸಿಬ್ಬಂದಿ ಹೆಸರು | ಪ್ರಸ್ತುತ ಹುದ್ದೆ | ಪದೊನ್ನತಿ ನಂತರದ ಹುದ್ದೆ |
|---|---|---|
| ಶ್ರೀ ಗಣೇಶ್ ಜಿ.ಕೆ. | ಮುಖ್ಯವ್ಯವಸ್ಥಾಪಕರು | ಸಹಾಯಕ ಮಹಾಪ್ರಬಂಧಕರು |
| ಶ್ರೀ ಕರುಣಾಕರ್ ಶೆಟ್ಟಿ | ವ್ಯವಸ್ಥಾಪಕರು | ಹಿರಿಯ ವ್ಯವಸ್ಥಾಪಕರು |

## ಸಿಬ್ಬಂದಿ ವರ್ಗಾವಣೆ

| ಸಿಬ್ಬಂದಿ ಹೆಸರು | ಶಾಖೆ |
|---|---|
| ಶ್ರೀಮತಿ ತುಳಸಿ, ಶಾಖಾಧಿಕಾರಿ | ಬ್ರಹ್ಮಾವರ |
| ಶ್ರೀಮತಿ ಉಷಾ ಶೆಟ್ಟಿ, ಅಕೌಂಟೆಂಟ್ | ಕೇಂದ್ರ ಕಛೇರಿ |
| ಶ್ರೀ ಪ್ರಶಾಂತ್ ಪಿ.ಎ., ಅಕೌಂಟೆಂಟ್ | ಮುಲ್ಕಿ |

## ಅಭಿನಂದನೆಗಳು




ಅತೀ ಹೆಚ್ಚು ಬಾರಿ ರಕ್ತದಾನ ಮಾಡಿರುವ ನಮ್ಮ ಸಂಘದ ಚಿಲಿಂಬಿ ಶಾಖೆಯ ಸಹಸಿಬ್ಬಂದಿಯಾದ ಶ್ರೀ ಸುಧೀರ್ ಕುಮಾರ್‌ರವರನ್ನು, ಈ ಸಾಲಿನ ರಕ್ತದಾನ ದಿನಾಚರಣೆ ಅಂಗವಾಗಿ, ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆ ಮತ್ತು ಎ.ಜೆ. ಆಸ್ಪತ್ರೆಗಳಲ್ಲಿ ಆಯೋಜಿಸಿದ ಸಮಾರಂಭಗಳಲ್ಲಿ ಸನ್ಮಾನಿಸಲಾಯಿತು. ಶ್ರೀ ಸುಧೀರ್ ಕುಮಾರ್‌ರವರ ಈ ಮಾನವೀಯ ಸೇವೆಗೆ ಅಭಿನಂದನೆಗಳು.

ಲೇಖನ / ಅಂಕಣ

## DESIRED PERSONALITY CHARACTERISTICS FOR EFFECTIVE MANAGERS

Obviously, there arc some personality predispositions, which are favourable to managerial effectiveness and to the success of managers. Apart from possessing the necessary skills and abilities, managers need to develop a high tolerance for ambiguity. There are many changes taking place in the internal and the external environment of an organization.. Naturally, several unpredictable factors are involved in any complex situation, which are beyond the managers' control. Therefore, they should be able to, handle situations as they come, without experiencing undue stress. Thus, a high tolerance for ambiguity is a desired managerial trait. Managers with a good mix of achievements, affiliations and power will be successful in most situations. This is because they will have the drive to achieve the goals and the interpersonal orientation to get the job done through others. In sales and other people-oriented roles, extrovert managers will fit better in their jobs. Similarly, managers with internal locus of control will be more efficient as intellectual and skilled performers. Managers with good work ethic values, will get more involved in their jobs and make things happen. They are likely to be more successful in their jobs. Managers with Type A personalities may suit very well for some jobs, which have inbuilt performance pressures and deadlines. but they need to know how to relax through exercises and self-monitor their stress levels. Personality is a relatively stable factor, but our predispositions can be changed through conscious choice. For instance, our tolerance for ambiguity and ability to handle stress can be considerably enhanced; the attributions we make for success such as internal versus external-locus of control can be changed. Also, our latent needs can be activated and our skills in decision-making can be increased through training programs and by deliberately making the necessary changes. Recognizing the essential ingredients' for managerial success is the first step towards making the changes.

## STRESS REDUCING STRATEGIES

From the organization's. standpoint management may not be concerned when employees experience low to moderate levels of stress. No one can escape stress. But sincere attempts can be made to reduce it. An individual should make all out efforts to manage his own stress effectively. Following are the some of the ways to manage stress individually.

(a) One should take proper balanced diet at proper time.

(b) Avoid drinking and smoking.

(c) Regular exercise for fitness.

(d) Know your strong and weak points.

(e) Relax for sometime to control blood pressure and heart rate.

(f) Prayers like worshiping, offering Namaz, etc., meditations, yoga can help reduce tension.

(g) Effective time management by preparing daily lists of work according to their priorities and follow it.

(h) Plan your career.

(I) Open your heart to your friends; express your feelings, emotions, threats etc. It helps in relieving the mind from botheration.

(j) Take pride on your achievements and receive from others.

(k) Exercise control on yourself.

(l) Identify the factors causing stress. Try to keep away from them as far as possible.

The above are the ways and means to keep stress in check.

Private Circulation only

BOOK-POST

To,

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.